**ಎಂ.ವಿ.ಸಿ.14/2024, ಪಿ.ಡಬ್ಲ್ಯೂ-2 ಹೆಸರುಃ ಡಾ. ಮಂಜುನಾಥ ಕೆ**

**ದಿಃ14-01-2026 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಕೆ.ಇ.ಸಿ. ವಕೀಲರಿಂದಃ**

ನಾನು ನನ್ನ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಇದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತದೆ. ಪ್ರಮಾಣ ಪತ್ರದಲ್ಲಿ ಇರುವ ಸಹಿಗಳು ನನ್ನದೇ ಆಗಿರುತ್ತದೆ.

ನಿಪಿ-9 ರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಪಿ.ಎನ್. ವಕೀಲರಿಂದಃ**

2. ನಾನು ಅರ್ಜಿದಾರರಿಗೆ ಮೊದಲ ಬಾರಿಗೆ ನನ್ನ ಖಾಸಗಿ ಚಿಕಿತ್ಸಾಲಯದಲ್ಲಿ ಜನವರಿ 2025 ರಲ್ಲಿ ಚಿಕಿತ್ಸೆ ನೀಡಿರುತ್ತೇನೆ. ಅಂಗನ್ಯೂನ್ಯತೆಯ ಪ್ರಮಾಣಪತ್ರವನ್ನು ದಿಃ 05.03.2025 ರಂದು ನೀಡಿರುತ್ತೇನೆ. ದಿಃ 05.03.2025 ರ ನಂತರ ಅರ್ಜಿದಾರರು ಎರಡು ತಿಂಗಳ ನಂತರ ನನ್ನ ಬಳಿ ಬಂದಿದ್ದರು. ಅರ್ಜಿದಾರರು ಅಜ್ಜಂಪುರ ಗ್ರಾಮದವರು. ಅರ್ಜಿದಾರರು ರಸ್ತೆ ಅಪಘಾತಕ್ಕೆ ಒಳಗಾಗಿದ್ದು, ಬಲಗೈ ಮುಂಗೈನ ರೇಡಿಯಸ್ ಮೂಳೆ ಮುರಿದಿತ್ತು. ಸದರಿ ಮಣಿಕಟ್ಟಿನ ಕೀಲು ವಕ್ರವಾಗಿ ಕೂಡಿತ್ತು. ಬಲಗಾಲಿನಲ್ಲಿ ಟ್ಯೂಬಿಯ ಮುರಿತ ಆಗಿತ್ತು. ಆ ಬಗ್ಗೆ ಸರ್ಜರಿ ಕೂಡ ಮಾಡಿದ್ದೇವೆ. ಅರ್ಜಿದಾರರು ಅಪಘಾತದ ನಂತರದಲ್ಲಿ ಮೊದಲು ಕಡೂರಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. ನಂತರ ಶಿವಮೊಗ್ಗದ ಚಂದ್ರಗಿರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಚಂದ್ರಗಿರಿ ಆಸ್ಪತ್ರೆಯಲ್ಲಿ ಕೈ ಮತ್ತು ಕಾಲಿಗೆ ಸರ್ಜರಿ ಮಾಡಿ, ಸ್ಕ್ರೂ ಮತ್ತು ರಾಡನ್ನು ಎರಡೂ ಮೂಳೆಗಳಿಗೆ ಅಳವಡಿಸಿದ್ದಾರೆ. ನನ್ನ ಬಳಿ ಬರುವ ಪೂರ್ವದಲ್ಲಿ ಅರ್ಜಿದಾರರ ಶಿವಮೊಗ್ಗದ ಚಂದ್ರಗಿರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು. ನಾನು ಅರ್ಜಿದಾರರಿಗೆ ನೋವಿನ ಮಾತ್ರೆ ನೀಡಿದ್ದು, ಫಿಸಿಯೋಥೆರಪಿ ಮಾಡಿರುತ್ತೇನೆ. ನಾನು ಅರ್ಜಿದಾರರಿಗೆ ಚಿಕಿತ್ಸೆ ನೀಡಿದ ಬಗ್ಗೆ ದಾಖಲಾತಿ ನೀಡಿರುತ್ತೇನೆ.

3. ನಾನು ಜನವರಿ 2025 ರಲ್ಲಿ ಅರ್ಜಿದಾರರು ನನ್ನ ಬಳಿ ಬಂದಾಗ ಕ್ಷ ಕಿರಣ ತೆಗೆದಿಲ್ಲ. ಅಂಗನ್ಯೂನ್ಯತೆ ಪ್ರಮಾಪತ್ರವನ್ನು ನೀಡುವಾಗ ಗಾಯದ ಪ್ರಮಾಣಪತ್ರ, ಬಿಡುಗಡೆ ಸಾರಾಂಶ, ಕ್ಷ ಕಿರಣ ಪರೀಕ್ಷಿಸಿದ್ದು, ನಾನು ಅರ್ಜಿದಾರರನ್ನು ಖುದ್ದಾಗಿ ಪರೀಕ್ಷೆ

ಮಾಡಿರುತ್ತೇನೆ. ಅರ್ಜಿದಾರರು ಸಾರ್ವಜನಿಕ ಆಸ್ಪತ್ರೆ, ಹೊಳಲ್ಕೆರೆಯಲ್ಲಿ ಕ್ಷ ಕಿರಣ ತೆಗೆಸಿರುತ್ತಾರೆ. ಅರ್ಜಿದಾರರು ಸಾರ್ವಜನಿಕ ಆಸ್ಪತ್ರೆಯಲ್ಲಿ ಹೊರರೋಗಿಯಾಗಿ ಚಿಕಿತ್ಸೆ ಪಡೆಯುವ ಬಗ್ಗೆ ದಾಖಲಾತಿ ಮಾಡಿಸಿದಾಗ ಮಾತ್ರ ಕ್ಷ ಕಿರಣ ತೆಗೆಯುತ್ತಾರೆ ಎಂದರೆ ಸರಿ. ಸರ್ಕಾರಿ ಆಸ್ಪತ್ರೆಯಲ್ಲಿ ಅಂಗನ್ಯೂನ್ಯತೆ ಕುರಿತು ಪ್ರಮಾಣಪತ್ರ ನೀಡಲು ಅವಕಾಶ ಇದೆ. ಆ ರೀತಿ ನೀಡುವ ಪೂರ್ವದಲ್ಲಿ ಮೆಡಿಕಲ್ ಬೋರ್ಡಿನಿಂದ ಪೂರ್ವಾನುಮತಿಯನ್ನು ಪಡೆಯಬೇಕು. ಮೆಡಿಕಲ್ ಬೋರ್ಡಿನ ಮೂರು ಮಂದಿ ವೈದ್ಯರು ಸೇರಿ ಅಂಗನ್ಯೂನ್ಯತೆ ಪ್ರಮಾಣಪತ್ರ ನೀಡಬೇಕು ಎಂದರೆ ಸರಿ. ಕ್ಷ ಕಿರಣವನ್ನು ಸಾರ್ವಜನಿಕ ಆಸ್ಪತ್ರೆಯಲ್ಲಿ ಅಂಗನ್ಯೂನ್ಯತೆ ಪ್ರಮಾಣಪತ್ರವನ್ನು ನೀಡುವಾಗ ಸಲುವಾಗಿ ತೆಗೆಸಿರುತ್ತೇನೆ ಎಂದರೆ ಸರಿ. ಸಾರ್ವಜನಿಕ ಆಸ್ಪತ್ರೆಯಲ್ಲಿಯೇ ಅಂಗನ್ಯೂನ್ಯತೆ ಪ್ರಮಾಣಪತ್ರ ನೀಡಲು ತೊಂದರೆ ಇರಲಿಲ್ಲ. ಅರ್ಜಿದಾರರಿಗೆ ನಾನು ಖಾಸಗಿ ವೈದ್ಯನಾಗಿ ಅಂಗನ್ಯೂನ್ಯತೆ ಪ್ರಮಾಣಪತ್ರ ನೀಡಿದ್ದೇನೆ. ಚಂದ್ರಗಿರಿ ಆಸ್ಪತ್ರೆಯಲ್ಲಿ ಅರ್ಜಿದಾರರಿಗೆ ಗುಣಮಟ್ಟದ ಚಿಕಿತ್ಸೆ ನೀಡಿರುತ್ತಾರೆ ಎಂದರೆ ಸರಿ.

4. ಕಡೂರಿನಿಂದ ಶಿವಮೊಗ್ಗಕ್ಕೆ ಹತ್ತಿರ ಆಗುತ್ತದೆ ಎಂದರೆ ಸರಿ. ಅರ್ಜಿದಾರರಿಗೆ ಚಿಕಿತ್ಸೆಯನ್ನು ನೀಡಿರುವ ಚಂದ್ರಗಿರಿ ಆಸ್ಪತ್ರೆಯ ವೈದ್ಯರು ಈಗಲೂ ಸಹ ಅಲ್ಲಿಯೇ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅರ್ಜಿದಾರರಿಗೆ ಒಂದು ವರ್ಷ ಕಾಲ ತರುವಾಯದ ಚಿಕಿತ್ಸೆಯನ್ನು ಸದರಿ ವೈದ್ಯರೇ ನೀಡಿದ್ದಾರೆ ಎಂದರೆ ಸರಿ. ಅರ್ಜಿದಾರರು ನನ್ನ ಬಳಿ ಅಂಗನ್ಯೂನ್ಯತೆ ಪ್ರಮಾಣಪತ್ರವನ್ನು ಪಡೆಯುವ ಸಲುವಾಗಿ ಬಂದಿರುತ್ತಾರೆ ಎಂದರೆ ಸರಿ. ನಾನು ಅರ್ಜಿದಾರರಿಗೆ ಚಿಕಿತ್ಸೆಯನ್ನು ಪಡೆದಂತಹ ವೈದ್ಯರ ಬಳಿ ಹೋಗುವಂತೆ ಸೂಚನೆ ನೀಡಿಲ್ಲ. ಗಾಯಾಳುವಿಗೆ ಪ್ರಾರಂಭಿಕ ಹಂತದಿಂದ ಬಿಡುಗಡೆಯಾಗುವವರೆಗೂ ಹಾಗೂ ಆ ನಂತರದಲ್ಲಿ ಮುಂದುವರೆದ ಚಿಕಿತ್ಸೆಯನ್ನು ನೀಡುವವರೆಗೂ, ಚಿಕಿತ್ಸೆಯನ್ನು ನೀಡಿದಂತಹ ವೈದ್ಯರಿಗೆ ಸದರಿ ಗಾಯಾಳುವಿನ ದೈಹಿಕ ನ್ಯೂನ್ಯತೆಯ ಕುರಿತು ಹೆಚ್ಚಿನ ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ. ಹಾಗಾಗಿ ಅಂತಹ ವೈದ್ಯರೇ ಅಂಗನ್ಯೂನ್ಯತೆ ಪ್ರಮಾಣಪತ್ರವನ್ನು ವಿತರಿಸುವುದು ಸೂಕ್ತರಾಗಿರುತ್ತಾರೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಚಂದ್ರಗಿರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದ ನಂತರ ಮೂಳೆ ಮುರಿತ ಸಂಪೂರ್ಣವಾಗಿ ಕೂಡಿರುತ್ತದೆ ಎಂದರೆ ಸಾಕ್ಷಿ ವಕ್ರವಾಗಿ ಕೂಡಿರುತ್ತದೆ ಎಂದು ಹೇಳುತ್ತಾರೆ.

5. ನಾನು ಅರ್ಜಿದಾರರಿಗೆ ಕೇಂದ್ರ ಸರ್ಕಾರದ ಕೈಪಿಡಿಯ ಆಧಾರದಲ್ಲಿ ಅಂಗನ್ಯೂನ್ಯತೆ ಪ್ರಮಾಣಪತ್ರವನ್ನು ನೀಡಿರುತ್ತೇನೆ. ಅರ್ಜಿದಾರರ ಕೈಗೆ ಉಂಟಾಗಿರುವ ನ್ಯೂನ್ಯತೆಯ ಕುರಿತು ಶೇ.28.76 ರಷ್ಟು ಮತ್ತು ಕಾಲಿಗೆ ಉಂಟಾಗಿರುವ ನ್ಯೂನ್ಯತೆ ಕುರಿತು ಶೇ.35 ರಷ್ಟು ನೀಡಿರುತ್ತೇನೆ. ಅರ್ಜಿದಾರರ ಕೈಗೆ ರೇಡಿಯಸ್ ಮೂಳೆ ಮುರಿದಿದ್ದು, ಎರಡು ಮೂಳೆಗಳ ನಡುವಿನ ಕೀಲು ಊನಗೊಂಡಿರುತ್ತದೆ. ಅರ್ಜಿದಾರರಿಗೆ 55 ವರ್ಷ ವಯಸ್ಸು. ನಮ್ಮ ಆಸ್ಪತ್ರೆಯಲ್ಲಿರುವ ತೂಕದ ವಸ್ತು ಎತ್ತಿಸಿರುತ್ತೇನೆ. ಅರ್ಜಿದಾರರಿಗೆ ಯಾವ ವಸ್ತುವನ್ನು ಎತ್ತಿಸಿ ಪರೀಕ್ಷಿಸಿರುತ್ತೇನೆ ಎಂದು ಉಲ್ಲೇಖ ಮಾಡಿಲ್ಲ. ಅರ್ಜಿದಾರರಿಗೆ ಊಟ ಮಾಡಲು

ತೊಂದರೆಯಾಗುವ ಕುರಿತು, ವಸ್ತುವನ್ನು ಹಿಡಿಯಲು ಕಷ್ಟ ಆಗುವ ಬಗ್ಗೆ ಮತ್ತು ಬರವಣಿಗೆ ಮಾಡಲು ತೊಂದರೆಯಾಗುವ ಬಗ್ಗೆ ಕಂಡು ಬಂದಿರುತ್ತದೆ. ಅರ್ಜಿದಾರರಿಗೆ ಮಂಡಿಯೂರಿ ಕೂರಲು ಮತ್ತು ಕುಕ್ಕರುಗಾಲಿನಲ್ಲಿ ಕೂರಲು ಕಷ್ಟ ಆಗುತ್ತಿತ್ತು. ಒಂದೇ ಕಾಲಿನಲ್ಲಿ ನಿಲ್ಲಲು ಕಷ್ಟ ಆಗುವ ಬಗ್ಗೆ ಮತ್ತು ಮೆಟ್ಟಿಲು ಹತ್ತಲು ಕಷ್ಟ ಆಗುವ ಬಗ್ಗೆ ಕಂಡು ಬಂದಿರುತ್ತದೆ. ನಮ್ಮ ಆಸ್ಪತೆರಯಲ್ಲಿಯೇ ಅವುಗಳ ಕುರಿತು ಪರೀಕ್ಷೆ ಮಾಡಿರುತ್ತೇನೆ. ಬಲಗೈ ಕುಂಠಿತ ಆಗಿರಲಿಲ್ಲ. ಅಂತೆಯೇ ಬಲಗಾಲು ಕುಂಠಿತ ಆಗಿರಲಿಲ್ಲ. ಅರ್ಜಿದಾರರಿಗೆ ಯಾವುದೇ ನೋವು ಇರಲಿಲ್ಲ. ಅಂಗನ್ಯೂನ್ಯತೆ ಪ್ರಮಾಣಪತ್ರದ ಕುರಿತು ಶೇಕಡಾವಾರು ಅಂಗನ್ಯೂನ್ಯತೆಯನ್ನು ನನ್ನ ಇಚ್ಛೆಗೆ ಅನುಸಾರವಾಗಿ ನೀಡಬಹುದು ಎಂದರೆ ಸರಿಯಲ್ಲ.

6. ಕೇಂದ್ರ ಸರ್ಕಾರದ ಕೈಪಿಡಿಯ ಅಂಶಗಳನ್ನು ದುರುಪಯೋಗ ಪಡಿಸಿಕೊಂಡು ಹೆಚ್ಚಿನ ಅಂಗನ್ಯೂನ್ಯತೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರು ಏನು ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಅರ್ಜಿದಾರರು ಅಪಘಾತದ ಪೂರ್ವದಲ್ಲಿ ಇದ್ದ ರೀತಿಯಲ್ಲಿಯೇ ಈಗಲೂ ಸಹ ಇದ್ದಾರೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಯಾವುದೇ ಅಂಗನ್ಯೂನ್ಯತೆ ಉಂಟಾಗಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರವನ್ನು ಪಡೆಯುವ ಸಲುವಾಗಿ, ಸುಳ್ಳು ಅಂಗನ್ಯೂನ್ಯತೆ ಪ್ರಮಾಣಪತ್ರವನ್ನು ನೀಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ತುಂಬಾ ಪ್ರಕರಣಗಳಲ್ಲಿ ಗಾಯಾಳುಗಳಿಗೆ ಚಿಕಿತ್ಸೆಯನ್ನು ನೀಡದಿದ್ದಾಗ್ಯೂ, ಅಂಗನ್ಯೂನ್ಯತೆ ಪ್ರಮಾಣಪತ್ರಗಳನ್ನು ನೀಡುತ್ತಿದ್ದೇನೆ ಎಂದರೆ ಸಾಕ್ಷಿ ಅದು ನನ್ನ ವೃತ್ತಿ ಎಂದು ಹೇಳುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ